ಮಾಡತೊಡಗಿತು... ಆಗಲೇ ನನಗೆ ನನ್ನ ವಾಚಿನ ನೆನಪಾಗಿದ್ದು. ವಾಚನ್ನು ಗಿರವಿ ಇಟ್ಟು, ಮತ್ತೆ ಬಂದು ಬಿಲ್ಲಿನ ಮೊಬಲಗನ್ನು ತೀರಿಸುತ್ತೇನೆಂಬ ಉಪಾಯ ಹೊಳೆದಾಗ ನಾನು ನಿರಾಳನಾದೆ.

ವೇಯ್ಟರ್, ದೊಡ್ಡ ಗಾತ್ರದ ರಸಭರಿತ ಅಸ್ಪಾರಾಗಸ್ ದಂಟುಗಳನ್ನು ಕಲಾತ್ಮಕವಾಗಿ ಶೃಂಗರಿಸಿ ನನ್ನ ಅಭಿಮಾನಿಯ ಮುಂದಿರಿಸಿದ. ಅವುಗಳ ಮೇಲೆ ಚೆಲ್ಲಿದ ಬೆಣ್ಣೆ ನಿಧಾನವಾಗಿ ದ್ರವ ರೂಪದಲ್ಲಿ ಕರಗುತ್ತಾ, ಅದರ ಮಧುರ ಸುವಾಸನೆ ನನ್ನ ಮೂಗಿನೆಡೆಗೆ ಬೀಸತೊಡಗಿದಾಗ ನನ್ನ ಹಸಿವು ಕೆರಳತೊಡಗಿತು. ನನ್ನ ನಲ್ಮೆಯ ಸಾಹಿತ್ಯಾಭಿಮಾನಿ ಹಸಿದ ಹೆಬ್ಬುಲಿಯಂತೆ ಆ ರಸಭರಿತ ಅಸ್ಪಾರಾಗಸ್ ದಂಟುಗಳನ್ನು ಮೆಲ್ಲುತ್ತಿರುವುದನ್ನು ನೋಡುತ್ತಾ ನಾನು ಆಕೆಯೊಂದಿಗೆ ಸಾಹಿತ್ಯ ಪ್ರಕಾರದಲ್ಲಿ ನಾಟಕದ ಮಹತ್ವದ ಬಗ್ಗೆ ಚರ್ಚಿಸುತ್ತಿದ್ದಂತೆ ಆಕೆ ತಟ್ಟೆಯನ್ನು ಸ್ವಚ್ಛಗೊಳಿಸಿದಳು.

"ಮೇಡಂ, ಕಾಫಿ?" ನಾನು ಕೇಳಿದೆ.

"ಓಹ್, ಪ್ಲೀಜ್. ಐಸ್‌ಕ್ರೀಂ ಮತ್ತು ಕಾಫಿ."

ನಾನೀಗ ನಿರಾತಂಕನಾಗಿ ನನಗೊಂದು ಕಾಫಿ ಮತ್ತು ನನ್ನ ಅಭಿಮಾನಿಗಾಗಿ ಐಸ್‌ಕ್ರೀಂ ಮತ್ತು ಕಾಫಿಯನ್ನು ಆರ್ಡರ್ ಮಾಡಿದೆ.

"ಒಂದು ವಿಚಾರದಲ್ಲಿ ಮಾತ್ರ ನಾನು ಎಂದಿಗೂ ರಾಜಿಯಾಗುವುದಿಲ್ಲ..." ನನ್ನ ಅಭಿಮಾನಿ ಗಂಭೀರ ಸ್ವರದಿಂದ ಹೇಳಿದಳು: "ಊಟ ಮುಗಿಸಿ ಏಳುವಾಗ ಮತ್ತೂ ಸ್ವಲ್ಪ ತಿನ್ನಬಹುದಿತ್ತು ಎಂಬ ಭಾವನೆಯಿಂದ ಎದ್ದೇಳಬೇಕು."

"ನಿಮಗೆ ಮತ್ತಿನ್ನೇನಾದರೂ ತಿನ್ನಬೇಕು ಅಂತ ಅನಿಸುತ್ತಿದೆಯಾ ಮೇಡಂ?" ನಾನು ಕೇಳಿದೆ.

"ಓಹ್, ನೊ, ನೋ... ನಿಜವಾಗಲೂ ನನಗೆ ಹಸಿವೆಯೇ ಇಲ್ಲ! ನಾನು ಸಾಮಾನ್ಯವಾಗಿ ಲಂಚನ್ನು ತೆಗೆದುಕೊಳ್ಳುವುದೇ ಇಲ್ಲ. ಬೆಳಗ್ಗೆ ಒಂದು ಕಾಫಿ ಬಿಟ್ಟರೆ ಸಂಜೆ ಊಟ, ಅಷ್ಟೇ! ಯಾವತ್ತಾದರೂ ಲಂಚ್ ತೆಗೆದುಕೊಂಡರೂ, ಅದು ತುಂಬಾ, ತುಂಬಾ, ತುಂಬಾ ಲೈಟ್. ನಿಮ್ಮ ಹಾಗೆ ಹೆವಿ ಲಂಚ್ ಯಾವತ್ತೂ ಇಲ್ಲಪ್ಪ! ಅದನ್ನು ಕಲ್ಪಿಸಿಕೊಳ್ಳಲೂ ನನಗೆ ಆಗುವುದಿಲ್ಲ!"

"ಓಹ್!" ಬೇರೆ ಏನು ಹೇಳುವುದೆಂದೇ ನನಗೆ ತೋಚಲಿಲ್ಲ.

ಅಂದು ನನ್ನ ಅದೃಷ್ಟ ಚೆನ್ನಾಗಿರಲಿಲ್ಲವೆಂದು ಕಾಣಿಸುತ್ತದೆ. ನಾವು ಕಾಫಿಗೆ ಕಾಯುತ್ತಿರುವಾಗ ಹೆಡ್ ವೇಯ್ಟರ್ ಶೃಂಗರಿಸಿದ ಬುಟ್ಟಿಯಲ್ಲಿ ದಪ್ಪದಪ್ಪನೆಯ ರಸಭರಿತ ಪೀಚಸ್‌ಗಳನ್ನು ಪ್ರದರ್ಶಿಸುತ್ತಾ ಡೈನಿಂಗ್ ಹಾಲಿನೊಳಗೆ ಬಂದ. ಅವನ ಮುಖದ ಮೇಲೆ ಕೃತಕ ನಗು ಎದ್ದು ಕಾಣಿಸುತ್ತಿತ್ತು. ಪೀಚಸ್‌ಗಳ ಗುಲಾಬಿ ರಂಗು ಆಗತಾನೇ ಪ್ರಾಯಕ್ಕೆ ಬಂದ ಹೆಣ್ಣಿನ ಕೆನ್ನೆಗಳಂತೆ ಮಿರುಗುತ್ತಿತ್ತು. ನನಗೆ ಗೊತ್ತಿರುವಂತೆ ಅದು ಪೀಚಸ್‌ಗಳ ಸೀಜನೇ ಆಗಿರಲಿಲ್ಲ. ಬೆಲೆ ಎಷ್ಟೋ. ಅದೂ ಗೊತ್ತಾಗಲು ತಡವಾಗಲಿಲ್ಲ. ನನ್ನ ಸಾಹಿತ್ಯಾಭಿಮಾನಿ ಮಾತನಾಡುತ್ತಲೇ ಸಹಜವಾಗಿ ಎಂಬಂತೆ ಬುಟ್ಟಿಯಿಂದ ಒಂದು ಹಣ್ಣನ್ನು ಎತ್ತಿ ಕಚ್ಚಿದಳು.

"ನೀವು ಆ ದರಿದ್ರ ಮಟನ್ ಚಾಪ್ಸ್ ತಿಂದು ಹೊಟ್ಟೆನ ಗೊಬ್ಬರದ ಗುಂಡಿ ಮಾಡಿಕೊಂಡಿರಿ! ನಿಮಗೆ ಈಗ ಬೇಕೆಂದರೂ ಒಂದು ಫ್ರೂಟ್ ತಿನ್ನಲಾಗುವುದಿಲ್ಲ! ನನಗೆ ನೋಡಿ! ಈ ಪೀಚ್ ತಿಂದೂ ಕೂಡ ನನ್ನ ಹೊಟ್ಟೆಯಲ್ಲಿ ಮತ್ತೂ ಅಷ್ಟು ಜಾಗ ಉಳಿದಿರುತ್ತದೆ... ಅದಕ್ಕೇ ಲಂಚ್ ಯಾವತ್ತೂ ಲೈಟಾಗಿ, ಸರಳವಾಗಿ ಇರಬೇಕು ಎಂದು ಹೇಳುವುದು!"

"ಒಂದು ಜುಜುಬಿ ಮಟನ್ ಚಾಪ್ಸ್."

ವೇಯ್ಟರ್ ನಾಟಕೀಯವಾಗಿ ವಯ್ಯಾರದಿಂದ ಬಳುಕುತ್ತಾ ಬಿಲ್ಲನ್ನು ತಂದಿತ್ತ.

ನಾನು ತಕ್ಷಣ ಫೋಲ್ಡರನ್ನು ತೆರದು ನೋಡಿದೆ. ಬಿಲ್ಲನ್ನು ಪಾವತಿಸಿ ಉಳಿದ ಮೂರು ಫ್ರ್ಯಾಂಕುಗಳನ್ನು ವೇಯ್ಟರನಿಗೆ ಭಕ್ಷಿಸು ಕೊಟ್ಟೆ. ನನ್ನ ಅಭಿಮಾನಿ ಆ ಮೂರು ಫ್ರ್ಯಾಂಕುಗಳನ್ನು